## ಧೈರ್ಯ ತುಂಬಿದ ಲೇಖನ



‘ಲೇ–ಆಫ್’ (ಕಾವ್ಯಶ್ರೀ ಎನ್, ಡಿ.15) ಮುಖಪುಟ ಲೇಖನ ಸಕಾಲಿಕವಾಗಿದೆ. ಸಂಸ್ಥೆಗಳ ಆದಾಯ ಮತ್ತು ಹಣಕಾಸಿನ ಹಿನ್ನೆಲೆಯಲ್ಲಿ ನೌಕರರನ್ನು ವಜಾ ಮಾಡುವ ‘ಲೇ ಆಫ್’ ಪದ್ಧತಿ ಇಂದು ನಿನ್ನೆಯದಲ್ಲ. ಅದಕ್ಕೆ ಕಂಗಾಲಾಗುವ ಬದಲು ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದನ್ನು ಲೇಖನ ಸವಿವರವಾಗಿ ತಿಳಿಸಿಕೊಟ್ಟಿದೆ. ‘ಲೇ ಆಫ್’ಗೆ ಹೆದರುವ ಅವಶ್ಯಕತೆ ಇಲ್ಲ ಎಂದು ಧೈರ್ಯ ತುಂಬಿದೆ.

–ರಾಜೀವ್ ಎನ್. ಮಾಗಲ್, ಹಾಸನ

## ಮಾರ್ಗದರ್ಶನ ನೀಡಿದೆ

‘ಲೇ–ಆಫ್’ ಲೇಖನ ಸದ್ಯದ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಬಿಂಬಿಸಿದೆ. ಕೆಲಸ ಕಳೆದುಕೊಳ್ಳುವ ಮುನ್ನ ಅಥವಾ ಕಳೆದುಕೊಂಡ ಮೇಲೆ ಧೃತಿಗೆಡದೆ ಹೇಗೆ ಮುಂದುವರೆಯಬೇಕೆಂದು ಮಾರ್ಗದರ್ಶನ ನೀಡಿದೆ. ಕಂಫರ್ಟ್ ಝೋನ್‌ನಲ್ಲಿರುವಾಗಲೇ ಜಾಗರೂಕವಾಗಬೇಕೆಂಬ ಎಚ್ಚರಿಕೆ ರವಾನಿಸಿದೆ.

–ಸೀಮಾ ಹಳ್ಳಿಕೇರಿಮಠ, ಬೆಳಗಾವಿ

## ಆರ್ಥಿಕ ಶಿಸ್ತಿನ ಪ್ರಾಮುಖ್ಯ ತಿಳಿಸಿತು

ನೌಕರರನ್ನು ಕೆಲಸದಿಂದ ವಜಾಗೊಳಿಸುವ ಬಗ್ಗೆ, ನಂತರದ ಅವರ ಸ್ಥಿತಿಗತಿಗಳ ಕುರಿತಂತೆ ‘ಲೇ–ಆಫ್’ ಲೇಖನದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಒಳ್ಳೊಳ್ಳೆ ಕಂಪನಿಗಳಲ್ಲಿ ಲಕ್ಷಾಂತರ ಎಣಿಸುತ್ತಿದ್ದ ನೌಕರರು ಆರ್ಥಿಕ ಶಿಸ್ತಿಲ್ಲದ ಪರಿಣಾಮ ಅನುಭವಿಸುತ್ತಿರುವ ಕಷ್ಟಕೋಟಲೆಗಳ ಕುರಿತೂ ತಿಳಿಸಲಾಗಿದೆ. ನೌಕರಿ ಚಿಕ್ಕದಿರಲಿ, ದೊಡ್ಡದಿರಲಿ ಯೋಜಿತ ಆರ್ಥಿಕ ಶಿಸ್ತಿದ್ದರೆ ಜೀವನ ಸುಖಮಯ ಎಂಬ ಅಂಶವನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ.

–ಕೆ.ಎನ್. ಶ್ವೇತಾ, ತುಮಕೂರು

## ಮನುಕುಲಕ್ಕೆ ಅವಮಾನದ ಸಂಗತಿ

‘ಕಡಲಲ್ಲಿ ಪ್ಲಾಸ್ಟಿಕ್: ಅದೆಷ್ಟು ಬಲಿ?’ (ಎನ್. ವಾಸುದೇವ್, ಡಿ.15) ಲೇಖನದಲ್ಲಿ ಕಡಲಜೀವಿಗಳು ಮನುಷ್ಯನ ನಿರ್ಲಕ್ಷದಿಂದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ನುಂಗಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿರುವುದರ ಬಗ್ಗೆ ಓದಿ ಮನಕಲಕಿತು. ಅಳಿವಿನಂಚಿನಲ್ಲಿರುವ ತಿಮಿಂಗಿಲಗಳು ಈ ರೀತಿ ಸಾವನ್ನಪ್ಪುತ್ತಿರುವುದು ನಮ್ಮ ಮನುಕುಲಕ್ಕೆ ಅವಮಾನದ ಸಂಗತಿ. ಪ್ರಾಣಿ ರಕ್ಷಣಾ ಸಂಘಗಳು ಮತ್ತು ಇತರ ಸಂಸ್ಥೆಗಳು ಒಗ್ಗೂಡಿ ಮನುಷ್ಯನ ಇಂತಹ ನಿರ್ಲಕ್ಷಕ್ಕೆ ಏನಾದರೂ ಕಠಿಣ ಕ್ರಮ ಕೈಗೊಳ್ಳುವಂತಾದರೆ ಬಹಳ ಒಳಿತು.

–ಆಶಾ ಅಪ್ರಮೇಯ, ದಾವಣಗೆರೆ

## ಮಧುರ ನೆನಪಿನ ಅನುಭವ ಕಥನ

‘ಆತ್ಮ ಸಂಗಾತದ ಹಳೆಯ ವಸ್ತುಗಳು’ (ಜ್ಯೋತಿ ಡಿ. ಬೊಮ್ಮಾ) ಲೇಖನ ಚೆನ್ನಾಗಿದೆ. ಯಾಂತ್ರಿಕ ಬದುಕಿನಲ್ಲಿ ಮುಳುಗಿಹೋದ ಜನರನ್ನು ತುಸು ಆತ್ಮಾವಲೋಕನಕ್ಕೆ ಹಚ್ಚುವಂತಿದೆ. ವಸ್ತುಗಳು ಹಳತಾದರೂ ಅದರ ನೆನಪು ಚಿರಂತನ ಎಂಬುದನ್ನು ಈ ಅನುಭವ ಕಥನ ನಿರೂಪಿಸಿದೆ.

–ರಾಜೇಶ್ವರಿ ಬೊರಗಿ, ಹಾವೇರಿ

## ರಾವಣನ ರಾಜಧಾನಿ ಕಿಷ್ಕಿಂಧೆಯಲ್ಲ

ವಸುಮತಿ ಉಡುಪ ಅವರ ‘ಅಂತಃಪುರ’ ಧಾರಾವಾಹಿ ಪ್ರಥಮ ಕಂತಿನಲ್ಲಿಯೇ ಸಹಜ ಸುಂದರ ನಿರೂಪಣೆಯಿಂದ ಆಪ್ತವಾಗಿದೆ. ಗ್ರಾಮೀಣ ಮಧ್ಯಮವರ್ಗದ ಹೆಣ್ಣುಮಕ್ಕಳ ನೋವನ್ನು ಸರಳಭಾಷೆಯಲ್ಲಿ ನಿರೂಪಿಸುವ ಬರಹ ಹೃದಯಕ್ಕೆ ಹತ್ತಿರವಾಗುತ್ತದೆ. ಆದರೆ ಬರಹದಲ್ಲಿ ರಾವಣನ ರಾಜಧಾನಿ ಕಿಷ್ಕಿಂಧೆ ಎಂದು ಬರೆಯಲಾಗಿದೆ. ಕಿಷ್ಕಿಂಧೆಯಲ್ಲಿ ಇದ್ದದ್ದು ರಾವಣನಲ್ಲ, ವಾಲಿ ಹಾಗೂ ಸುಗ್ರೀವ.

–ಗೀತಾ ನೆಲ್ಲೀಕಾಯಿ

## ಕೆಂಪುಚೇಳುಗಳ ಪ್ರಣಯ ಸ್ವಾರಸ್ಯ

‘ಕೆಂಪುಚೇಳಿನ ಪ್ರಣಯಕೇಳಿ’ (ಶಶಿಧರ ಸ್ವಾಮಿ ಆರ್. ಹಿರೇಮಠ, ಡಿ.15) ಲೇಖನ ಚೆನ್ನಾಗಿದೆ. ಕೆಂಪುಚೇಳುಗಳ ಕುರಿತ ಅಪರೂಪದ ಸಂಗತಿಯನ್ನು ಲೇಖಕರು ಚಿತ್ರ ಸಮೇತ ವಿವರಿಸಿರುವುದು ಸೊಗಸಾಗಿದೆ. ನಮ್ಮ ಭಾಗದ ಗ್ವಾರಪ್ಪನಗುಡ್ಡದ ಪರಿಸರ, ಜೀವಜಗತ್ತನ್ನು ಕೂಡ ಪರಿಚಯಿಸಿದ್ದಾರೆ.

–ಜೀವರಾಜ ಹ ಛತ್ರದ, ಬ್ಯಾಡಗಿ

ಕೆಂಪುಚೇಳುಗಳ ಪ್ರಣಯದ ಪರಿಯನ್ನು ಲೇಖಕರು ಸುಂದರವಾಗಿ ವಿವರಿಸಿದ್ದಾರೆ. ಚಿತ್ರಗಳನ್ನು ತೆಗೆಯುವಲ್ಲಿ ಲೇಖಕರ ತಾಳ್ಮೆ ಮೆಚ್ಚುವಂಥದ್ದು.

–ಸಿ.ಎಚ್. ಬಾಳನಗೌಡ್ರ, ಶಿವಮೊಗ್ಗ

## ಪದಬಂಧ ಸ್ಪಷ್ಟನೆ

ಪದಬಂಧ (ಡಿ. 8ರ ಸಂಚಿಕೆ) ಕ್ರಾಸ್‌ವರ್ಡ್‌ನಲ್ಲಿ ಆಕಸ್ಮಿಕವಾಗಿ ಕೆಲವು ತಪ್ಪುಗಳು ನುಸುಳಿವೆ. ಅದಕ್ಕಾಗಿ ವಿಷಾದಿಸುತ್ತೇವೆ.

–ಸಂ

## ರಾಜಗೃಹ ನೋಡುವ ಆಸೆ ಹುಟ್ಟಿತು

‘ಪ್ರಜಾಪ್ರಭುತ್ವವಾದಿಯ ರಾಜಗೃಹ’ (ಎಂ.ಎಸ್. ಆಶಾದೇವಿ, ಡಿ.15) ಲೇಖನ ಓದಿ ಸ್ವತಃ ಅಂಬೇಡ್ಕರ್ ಅವರ ಮನೆಗೆ ಹೋದ ಅನುಭವವಾಯಿತು. ಮಹಾತ್ಮಗಾಂಧಿ ಮತ್ತು ಡಾ. ಅಂಬೇಡ್ಕರ್ ಅವರ ಹೋರಾಟದ ಹಾದಿ ಭಿನ್ನವಾಗಿದ್ದರೂ ವಿಚಾರಗಳು, ಒಟ್ಟಾರೆ ತುಳಿತಕ್ಕೊಳಗಾದವರ ಪರವಾಗಿದ್ದವು ಎಂಬುದನ್ನು ಒಪ್ಪಲೇಬೇಕು. ಲೇಖನ ಓದಿದ ಮೇಲೆ ರಾಜಗೃಹ ನೋಡಲೇಬೇಕೆಂಬ ತವಕ ಉಂಟಾಗಿದೆ.

–ಸಿ.ಕೆ. ಗಣಪ್ಪನವರ ಮುಂಡರಗಿ, ಗದಗ

## ಅಂಬೇಡ್ಕರ್ ನೆನಪುಗಳ ಸುತ್ತ...

ಮುಂಬೈನಲ್ಲಿರುವ ನಾನು ಕೆಲಸದ ನಿಮಿತ್ತ ಪ್ರತಿ ದಿನ ದಾದರ್‌ನಲ್ಲಿ ರೈಲು ಬದಲಿಸಬೇಕು.



ಡಿಸೆಂಬರ್ 6ರಂದು ಅಂಬೇಡ್ಕರ್ ಮಹಾಪರಿನಿರ್ವಾಣ ದಿನ ದಾದರ್ ರೈಲ್ವೆ ಸ್ಟೇಷನ್‌ನಲ್ಲಿ ಬಂದೋಬಸ್ತ್ ಮಾಡಲಾಗಿತ್ತು. ನೂರಾರು ಮಂದಿ ಅಂಬೇಡ್ಕರ್ ಸಮಾಧಿ ಸ್ಥಳಕ್ಕೆ ಬಂದು ಪ್ರಾರ್ಥನೆ ಸಲ್ಲಿಸುತ್ತಿದ್ದರು. ಅಂಬೇಡ್ಕರ್ ಘೋಷಣೆಗಳನ್ನು ಕೂಗುತ್ತಾ ದಲಿತ ಸಂಘಟನೆಗಳ ಧ್ವಜ ಹಾರಿಸುತ್ತಾ ಚೈತ್ಯಭೂಮಿಗೆ ಭೇಟಿ ನೀಡಿ ಅಲ್ಲಿಂದ ದಾದರ್ ಪೂರ್ವದಲ್ಲಿರುವ ‘ರಾಜಗೃಹ’ ವೀಕ್ಷಿಸುವುದು ಪರಂಪರೆಯೇ ಆಗಿದೆ. ಲೇಖನ ಓದುತ್ತಿದ್ದಂತೆ ಈ ಎಲ್ಲ ದೃಶ್ಯಗಳಿಗೂ ಮರುಜೀವ ಬಂದಂತೆ ಕಂಡಿತು. ಅಂಬೇಡ್ಕರ್ ನೆನಪುಗಳು ಮನಸು ತುಂಬಿಕೊಂಡವು.

–ಶ್ರೀನಿವಾಸ ಜೋಕಟ್ಟೆ, ಮುಂಬೈ

## ವೇದ್ಯವಾದ ವಿವರಣೆ...

ಕಥನ ಚಿಂತನ ಬರಹ ಮನಮುಟ್ಟುವಂತಿದೆ. ಅಂಬೇಡ್ಕರ್ ಅವರ ಮನೆಯನ್ನು ನಾವೇ ನೋಡಿ ಸುತ್ತಾಡಿದಂಥ ಅನುಭವ ಲೇಖನದಿಂದ ದಕ್ಕಿತು. ಅಂಬೇಡ್ಕರ್ ಅವರ ಆಲೋಚನೆ, ಸಿದ್ಧಾಂತಗಳನ್ನು ಹಾಸುಹೊದ್ದಿರುವ ಆ ಮನೆಯನ್ನು ಲೇಖಕಿಯು ಪರಿಚಯಿಸಿದ ರೀತಿ ವೇದ್ಯವಾಗಿತ್ತು.

–ಶಶಿಧರ. ಎಲೆ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in